

ನೀಳ್ಗತೆ

ಎಚ್. ನಾಗವೇಣಿ

# ಬೆಸ್ತ ಮತ್ತು ಮೀನು

**(ಹಿಂದಿನ ಸಂಚಿಕೆಯಿಂದ)**

ಐಸಿಯುನಿಂದ ವಾರ್ಡ್‌ಗೆ ಶಿಫ್ಟ್ ಆದ ಮಗುವಿನ ಮುಖದ ದೇಖಿ ನೋಡಿದಾಗ ಅದು ಮೊದಲಿನಂತಿಲ್ಲ ಎಂದು ಅಮ್ಮ ಕುಮುದಳಿಗೆ ಅದ್ಯಾಕೋ ಅನಿಸತೊಡಗಿತ್ತು. ತನ್ನ ಚಿಗುರಿನ ಸಂಕಟ ಮರಕ್ಕೆ ಎಂದಿಗಾದರೂ ತಿಳಿಯದೆ ಹೋದೀತೆ? ಮಗು ಯಾರ ಮುಖವನ್ನೂ ನೋಡುತ್ತಿಲ್ಲ; ಅದರ ಮುಖದ ಇಡೀ ನಿರ್ಲಿಪ್ತತೆಯ ಭಾವ; ಅದರ ಕೊರಳೊಳಗಿಂದ ಒಂದು ಸಣ್ಣ ಸ್ವರವೂ ಹೊರ ಬರುತ್ತಿಲ್ಲ! ಕುಮುದಳಿಗ್ಯಾಕೋ... ಮಗುವಿನ ಬಗ್ಗೆ ಅನುಮಾನ ಬಂದು ಮಗುವನ್ನು ಎಬ್ಬಿಸಿ ನಿಲ್ಲಿಸಲು ಪ್ರಯತ್ನಿಸಿದ್ದಾಳೆ... ಆದರೆ ಮಗು ಎದ್ದು ನಿಲ್ಲುತ್ತಿಲ್ಲ... ಸೊಂಟದ ಭಾಗವೇ ಇಲ್ಲದಂತೆ ಮಗು ವಾಲುತ್ತಿದೆ! ಮಗನ ಸ್ಥಿತಿ ಕಂಡು ಕುಮುದಳು ಚೀರಿ... ಅಲ್ಲೇ ಪ್ರಜ್ಞೆ ತಪ್ಪಿ ಕುಸಿದಿದ್ದಾಳೆ. ಪರಿಸ್ಥಿತಿ ಹದಗೆಡುತ್ತಿದ್ದಂತೆ ತಕ್ಷಣವೇ ಮಕ್ಕಳವೈದ್ಯರಿಗೆ ಕರೆ ಹೋಗಿತ್ತು. ಅವರಿವರು ಕುಮುದಳನ್ನು ಉಪಚರಿಸಿ ಎದ್ದು ಕೂರಿಸುವಷ್ಟರಲ್ಲಿ ಆಸ್ಪತ್ರೆಯ ಮಕ್ಕಳ ತಜ್ಞ ಡಾ. ವಿನಾಯಕ್ ಆತಂಕದಿಂದ ವಾರ್ಡ್‌ಗೆ ಬಂದಾಗಿತ್ತು.